ವಿಷಯ : ಮುಂಡರಗಿ ಪುರಸಭೆಯ ನೌಕರರಿಗೆ ವೇತನ ನೀಡದಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 343(478)

ಶ್ರೀ ಕೆ.ಹೆಚ್. ಕುರಡಗಿ(ಮುಂಡರಗಿ) : ಮಾನ್ಯ ನಗರಾಭಿವೃದ್ಧಿ ಮತ್ತು ವರ್ಕ್ಸ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ಪುರಸಭೆಯ ನೌಕರದಾರರಿಗೆ 6 ತಿಂಗಳ ಸಂಬಳವನ್ನು ಕೊಟ್ಟಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ. ಆರ್. ಸಗೀರ್ ಅಹಮ್ಮದ್(ನಗರಾಭಿವೃದ್ಧಿ ಮತ್ತು ವರ್ಕ್ಸ್ ಸಚಿವರು)

ಅ) ಹೌದು.

ಆ) ಬಹಳಷ್ಟು ಪುರಸಭೆ ನಗರಸಭೆಗಳಲ್ಲಿ ಆಕ್ಟ್ರಾಯ್ ಅನುದಾನದಿಂದ ಅವರ ಸಂಬಳ ಕೊಡಲಾಗುತ್ತಿದೆ. ದಿನಾಂಕ : 30.7.94 ರಂದು ಮುಂಡರಗಿ ಪುರಸಭೆಗೆ ಆಕ್ಟ್ರಾಯ್ ಅನುದಾನ ಬಿಡುಗಡೆ ಮಾಡಲಾಗಿದೆ.

ವಿಷಯ : ಪರಿಶಿಷ್ಟ ಜಾತಿಃಪರಿಶಿಷ್ಟ ವರ್ಗದವರಿಗೆ ಕೇಂದ್ರದಿಂದ ಬರುವ ವಿಶೇಷ ಘಟಕ ಯೋಜನೆಯ ಹಣದ ಬಾಬ್ತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 344(411)

ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಎಷ್ಟು ಹಣ ವಿಶೇಷ ಘಟಕ ಯೋಜನೆ ಅಡಿಯಲ್ಲಿ 1994-95ನೇ ಸಾಲಿಗೆ ನಿಗದಿಪಡಿಸಲಾಗಿರುತ್ತದೆ?

ಆ) ಇದನ್ನು ಎಷ್ಟು ಇಲಾಖೆಯ ಮುಖಾಂತರ ವಿತರಣೆ ಮಾಡಿ ಈ ವರ್ಗದವರಿಗೆ ವಿತರಣೆ ಮಾಡಲಾಗಿದೆ?

ಇ) ಇದರ ಸದುಪಯೋಗದ ಬಗ್ಗೆ 'ಮೇಲ್ವಿಚಾರಣೆ' ಮಾಡಲು ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಮಟ್ಟದಲ್ಲಿ ಯಾವ ರೀತಿ ವ್ಯವಸ್ಥೆ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1994-95ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಅನುಷ್ಠಾನಕ್ಕಾಗಿ ಈ ಕೆಳಕಂಡಂತೆ ಹಣವನ್ನು ಆಯವ್ಯಯದಲ್ಲಿ ನಿಗದಿಗೊಳಿಸಲಾಗಿದೆ :-

	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ
	ರೂ. ಲಕ್ಷಗಳಲ್ಲಿ	
ಅ)ರಾಜ್ಯ ಯೋಜನೆ :		
1. ರಾಜ್ಯ ವಲಯ ಯೋಜನೆ	21011.55	3110.75
2. ಜಿಲ್ಲಾ ವಲಯ ಯೋಜನೆ	9341.48	1528.94
	30353.03	4639.69
ಆ)ವಿಶೇಷ ಕೇಂದ್ರೀಯ ನೆರವು	1778.70	217.10
	32131.73	4856.79

ಅ) ಜಿಲ್ಲಾ ವಲಯದ ಯೋಜನೆಗಳಿಗೆ ಹಣವನ್ನು ರಾಜ್ಯದ ಆರ್ಥಿಕ ಇಲಾಖೆಯು ವರ್ಷದ ಆಯವ್ಯಯದ 1/12ನೇ ಭಾಗವನ್ನು ಪ್ರತಿ ತಿಂಗಳು ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡುತ್ತದೆ. ಅಲ್ಲದೇ ರಾಜ್ಯವಲಯ ಯೋಜನೆಗಳಿಗೆ ಆರ್ಥಿಕ ಇಲಾಖೆಯು 33 ಅಭಿವೃದ್ಧಿ ಇಲಾಖೆ 7 ನಿಗಮ : ಮಂಡಳಿಗಳ ಮುಖ್ಯಸ್ಥರುಗಳ ಮುಖಾಂತರ ಯೋಜನೆಗಳ ಅನುಷ್ಠಾನಕ್ಕೆ ಹಣ ಬಿಡುಗಡೆ ಮಾಡುತ್ತದೆ.

ಇ) ಈ ಯೋಜನೆಯ ಅನುಷ್ಠಾನದ ಪ್ರಗತಿಯನ್ನು ರಾಜ್ಯ ಮಟ್ಟದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ವಿಶೇಷ ಘಟಕ ಯೋಜನೆ :

ಗಿರಿಜನ ಉಪಯೋಜನೆಯ ಉನ್ನತ ಮಟ್ಟದ ಪರಮಾರ್ಶನ ಸಭೆಯಲ್ಲಿ ವಿಮರ್ಶೆ ಮಾಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗುವ 20 ಅಂಶಗಳ ಪರಿಶೀಲನಾ ಸಮಿತಿಯ ಸಭೆಯಲ್ಲಿ ಸಹ ಇದರ ವಿಮರ್ಶೆ ಮಾಡಲಾಗುವುದು. ಅಲ್ಲದೇ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ-ನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು ವಿಶೇಷ ಘಟಕ ಯೋಜನೆಃ ಗಿರಿಜನ ಉಪಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ಪರಮಾರ್ಶನ ಮಾಡಲಾಗುವುದು. ಇದರಿಂದಾಗಿ ವಿಶೇಷ ಘಟಕ ಯೋಜನೆ : ಗಿರಿಜನ ಉಪಯೋಜನೆಗಳ ಸದುಪಯೋಗವನ್ನು ನೋಡಿಕೊಳ್ಳಲಾಗುವುದು.

ವಿಷಯ : ಸರ್ವೆ ರಿಕಾರ್ಡ್‌ಗಳನ್ನು ರಕ್ಷಣೆ ಮಾಡುವ ವಿಚಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 346(413)

ಶ್ರೀ ಕರಿಯಣ್ಣ (ಹೂಳಿಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ವೆಯ ದಾಖಲೆ ಪತ್ರಗಳನ್ನು ಕಾದಿರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಆ) ಈ ದಾಖಲೆ ಪತ್ರಗಳು ಗೆದ್ದಲು ತಿಂದು, ಪೂರ್ಣ ನಾಶವಾಗುತ್ತಿರುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

(ಇ) ಸರ್ವೆ ದಾಖಲೆ ಪತ್ರಗಳನ್ನು ರಕ್ಷಣೆ ಮಾಡಲು ಆಧುನಿಕ ಕ್ರಮ ಕೈಗೊಳ್ಳಲಾಗುವುದೇ?